2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ**115/2018**</u>

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಮಂಜುಳಾ | ಪಿಡಬ್ಲೂ- 7 |
| ಗಂಡನ ಹೆಸರು | - | ರಾಜೇಗೌಡ | ಸಿಡಬ್ಲೂ - 9 |
| ವಯಸ್ಸು | - | 60 ವರ್ಷ | |
| ಉದ್ಯೋಗ | - | ಗೃಹಿಣಿ | |
| ವಾಸ ಸ್ಥಳ | - | ಉದಯನಗರ, ದಂಟರಮಕ್ಕಿ, ಚಿಕ್ಕಮಗಳೂರು | |

ದಿನಾಂಕಃ 20-04-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ ಮಾನ್ಯ ಪಿ.ಪಿ. ರವರಿಂದ -</u>

1. ಚಾಸಾ.10 ರಾಜೇಗೌಡ ಇವರು ನನ್ನ ಗಂಡ ಇರುತ್ತಾರೆ. ಪಿರ್ಯಾದಿ ಕಾವ್ಯಶ್ರೀ ನನ್ನ ಮಗಳು. 1 ನೇ ಆರೋಪಿ ಸುಪ್ರೀತ್ ನನ್ನ ಅಳಿಯ, 2 ಮತ್ತು 3 ನೇ ಆರೋಪಿಗಳು ಆತನ ತಾಯಿ ತಂದೆ ಮತ್ತು 4 ನೇ ಆರೋಪಿ 1 ನೇ ಆರೋಪಿಯ ಅಕ್ಕ ಇರುತ್ತಾರೆ. ನನಗೆ 4 ಜನ ಹೆಣ್ಣು ಮಕ್ಕಳು ಇರುತ್ತಾರೆ. 1 ನೇ ಮಗಳ ಹೆಸರು ಸುಮಾ, 2 ನೇ ಮಗಳ ಹೆಸರು ಕಾವ್ಯಶ್ರೀ, 3 ನೇ ಮಗಳ ಹೆಸರು ಶಾಂತಲ, 4 ನೇ ಮಗಳ ಹೆಸರು ಚಿತ್ರಕಲಾ. ನನ್ನ 2 ನೇ ಮಗಳು ಕಾವ್ಯಶ್ರೀಯನ್ನು ಮದುವೆ ಮಾಡಲೆಂದು ನಿಶ್ಚಯ ಮಾಡಿದಾಗ ನಮ್ಮ ಸಂಬಂಧಿಕರಾದ ಅಜ್ಜೇಗೌಡ ಜೆ.ಕೆ ಇವರು ಚಿಕ್ಕಮಗಳೂರಿನ ಲಕ್ಷ್ಮೀಶನಗರದಲ್ಲಿ ವಾಸವಾಗಿರುವ ಹೆಚ್.ಡಿ. ಹುಚ್ಚೇಗೌಡ ಮತ್ತು ಗೀತಾ ಇವರ ಮಗನಾದ ಸುಪ್ರೀತ್ ನ ಸಂಬಂಧವನ್ನು ನಮಗೆ ತೋರಿಸಿರುತ್ತಾರೆ. ಆಗ ನಾವು ಬೀರೂರಿನಲ್ಲಿ ವಾಸವಾಗಿದ್ದೆವು. ನಂತರ ನಾವು

ಹುಡುಗನ ಮನೆಗೆ ಹೋಗಿ ನೋಡಿ ನಮಗೆ ಒಪ್ಪಿಗೆಯಾಗಿದ್ದರಿಂದ ಮದುವೆ ಪ್ರಾಸ್ಥಾಪಕ್ಕೆ ಒಪ್ಪಿಕೊಂಡಿರುತ್ತೇವೆ. ಮದುವೆಯ ಮಾತುಕತೆ ಬೀರೂರಿನ ನಮ್ಮ ಮನೆಯಲ್ಲಿ ಆಗಿರುತ್ತದೆ. ಮದುವೆಯ ಮಾತುಕತೆ ಸಮಯದಲ್ಲಿ ನಮ್ಮ ಕಡೆಯಿಂದ ಅಜ್ಜೇಗೌಡ ಮತ್ತು ಹುಡುಗನ ಕಡೆಯಿಂದ ಆತನ ತಂದೆ ತಾಯಿ ಮತ್ತು ಅಕ್ಕ ಬಂದಿದ್ದರು. ಮದುವೆಯ ಮಾಡುಕತೆ ಸಮಯದಲ್ಲಿ ಆರೋಪಿಗಳು 500gm ಬಂಗಾರವನ್ನು ವರದಕ್ಷಿಣೆಯಾಗಿ ಕೊಡಲು ಕೇಳಿರುತ್ತಾರೆ. ಅದಕ್ಕೆ ನಾವು ಅಷ್ಟು ಕೊಡಲು ಆಗುವುದಿಲ್ಲ, ಹುಡುಗನಿಗೆ ಒಂದು Gold Chain ಮತ್ತು ಮಗಳಿಗೆ ಎಷ್ಟು ಸಾಧ್ಯವಾಗುತ್ತದೋ ಅಷ್ಟು ಬಂಗಾರ ಹಾಕುತ್ತೇವೆ ಎಂದು ಹೇಳಿರುತ್ತಾರೆ.

2. ನಂತರ ಮದುವೆ ಮಾತುಕತೆಯಾಗಿ ದಿಃ 04.03.2013 ರಂದು ಹಾಸನ ಜಿಲ್ಲೆಯ ಹಳೇಬೀಡಿನ ಶ್ರೀ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ನಮ್ಮ ಮಗಳು ಕಾವ್ಯಶ್ರೀಯನ್ನು 1 ನೇ ಆರೋಪಿಗೆ ಮದುವೆ ಮಾಡಿಕೊಟ್ಟಿರುತ್ತೇವೆ. ಮದುವೆ ಮಾತುಕತೆ ಸಂದರ್ಬದಲ್ಲಿ ಆದ ಮಾತಿನಂತೆ ಮದುವೆ ದಿನ ನಾವು ಹುಡುಗನಿಗೆ ಒಂದು ಬಂಗಾರದ ಸರ, ನಮ್ಮ ಮಗಳು ಕಾವ್ಯಶ್ರೀಗೆ ಒಂದು ಜೊತೆ ಬಳೆ, ಒಂದು ನೆಕ್ ಲೇಸ್, 2 ಜೊತೆ ಓಲೆ, 2 ಉಂಗುರಗಳನ್ನು ಹಾಕಿರುತ್ತೇವೆ.

3. ಮದುವೆಯಾದ ನಂತರ ನಮ್ಮ ಮಗಳು ಕಾವ್ಯಶ್ರೀ ತನ್ನ ಗಂಡನ ಜೊತೆ ಅವರ ಮನೆಯಲ್ಲಿ ವಾಸಮಾಡುತ್ತಾಳೆ. ನಂತರ ಕಾವ್ಯಶ್ರೀ ಗಂಡ 1 ನೇ ಆರೋಪಿಯ London ಗೆ ಹೋಗಬೇಕಾಗಿ ಬಂದಿದ್ದರಿಂದ ಅವನು ಹೋಗುತ್ತಾನೆ. ಕಾವ್ಯಶ್ರೀಯು ತನ್ನ ಗಂಡನ

ಜೊತೆಯಲ್ಲಿ ತಾನು London ಗೆ ಹೋಗುತ್ತೇನೆ ಎಂದಾಗ ಆಕೆಯ ಗಂಡನ ಮನೆಯವರು ಕಾವ್ಯಶ್ರೀಯು ಹೆಚ್ಚಿನ ವರದಕ್ಷಿಣೆ ತಂದಿರುವುದಿಲ್ಲ ಎಂಬ ಕಾರಣದಿಂದ ಅವಳನ್ನು 1 ನೇ ಆರೋಪಿಯ ಜೊತೆ ಕಳಿಸಿರುವುದಿಲ್ಲ. ಆ ರೀತಿ 1 ನೇ ಆರೋಪಿಯು ನನ್ನ ಮಗಳು ಕಾವ್ಯಶ್ರೀಯನ್ನು ತನ್ನ ತಂದೆ ತಾಯಿಯ ಮನೆಯಲ್ಲಿ ಇರುತ್ತಾಳೆ. ನಂತರ 1 ವರ್ಷವಾದ ಮೇಲೆ ಕಾವ್ಯಶ್ರೀಯು ತಾನು ತನ್ನ ಗಂಡನ ಜೊತೆ ಹೋಗಲೇ ಬೇಕು ಎಂದು ಅವಳ ಅತ್ತೆ ಮಾವನ ಕೈ ಕಾಲು ಹಿಡಿದು ಕೇಳಿಕೊಂಡಿದ್ದರಿಂದ ಅವರು ಅವಳನ್ನು London ಗೆ ಆಗ ಕಳುಹಿಸಿಕೊಟ್ಟಿರುತ್ತಾರೆ. ಕಾವ್ಯಶ್ರೀಯು ತನ್ನ ಗಂಡನ ಜೊತೆಯಲ್ಲಿ ಸುಮಾರು 6 ತಿಂಗಳು ಕಾಲ London ನಲ್ಲಿ ಇರುತ್ತಾಳೆ.

4. ನಂತರ London ನಿಂದ ಕಾವ್ಯಶ್ರೀ ಮತ್ತು 1 ನೇ ಆರೋಪಿ ಚಿಕ್ಕಮಗಳೂರಿಗೆ ಅವರ ಮನೆಗೆ ಬರುತ್ತಾರೆ.

5. ನಂತರ ದಿಃ 23.08.2015 ರಂದು 1 ನೇ ಆರೋಪಿಯು ನನ್ನ ಮಗಳು ಕಾವ್ಯಶ್ರೀಯನ್ನು ಸಿಕ್ಕಾಪಟ್ಟೆ ಹೊಡೆದಿರುತ್ತಾನೆ ಮತ್ತು ಅವಳ ಅತ್ತೆ ಮಾವರಾದ 2 ಮತ್ತು 3 ನೇ ಆರೋಪಿಗಳು ನನ್ನ ಮಗಳಿಗೆ ಮಾನಸಿಕವಾಗಿ ಮತ್ತು ದೈಹಿಕವಾಗಿ ಹಿಂಸೆ ಕೊಟ್ಟಿರುತ್ತಾರೆ. ಸದರಿ ವಿಚಾರವಾಗಿ ನನ್ನ ಮಗಳು 1 ರಿಂದ 3 ನೇ ಆರೋಪಿಗಳ ವಿರುದ್ದ ಚಿಕ್ಕಮಗಳೂರಿನ ನಗರ ಠಾಣೆಯಲ್ಲಿ ದೂರನ್ನು ಸಲ್ಲಿಸಿರುತ್ತಾಳೆ. ಠಾಣೆಯಲ್ಲಿ ಸದರಿನ ವಿಚಾರವಾಗಿ 2 ಕಡೆಯವರನ್ನು ಕರೆಯಿಸಿ ರಾಜೀ ಪಂಚಾಯಿತಿ ಮಾಡಿ ನನ್ನ ಮಗಳನ್ನು ಅವಳ ಗಂಡನ ಜೊತೆಯಲ್ಲಿ ಅವಳ ಅತ್ತೆ ಮಾವನ ಮನೆಗೆ

ಕಳುಹಿಸಿಕೊಟ್ಟಿರಲಾಗಿರುತ್ತದೆ. ನಂತರ 1 ನೇ ಆರೋಪಿಯು ನನ್ನ ಮಗಳನ್ನು ಬೆಂಗಳೂರಿಗೆ ಕರೆದುಕೊಂಡು ಹೋಗಿ ಸಂಸಾರ ಮಾಡಿರುತ್ತಾನೆ. ಆ ಸಮಯದಲ್ಲಿ ನನ್ನ ಮಗಳು ಗರ್ಭಿಣಿಯಾಗಿದ್ದು ನಂತರ ನಾವೆಲ್ಲರು ಅವಳ ಸೀಮಂತವನ್ನು ಮಾಡಿ ಕಾವ್ಯಶ್ರೀಯನ್ನು ಚಿಕ್ಕಮಗಳೂರಿಗೆ ಕರೆದುಕೊಂಡು ಬಂದಿರುತ್ತೇವೆ. ನಂತರ ಕಾವ್ಯಶ್ರೀಯು ದಿಃ 16.06.2016 ರಲ್ಲಿ ಒಂದು ಗಂಡು ಮಗುವಿಗೆ ಜನ್ಮ ನೀಡಿರುತ್ತಾಳೆ ಮತ್ತು 9 ತಿಂಗಳು ಕಾಲ ನಮ್ಮ ಮನೆಯಲ್ಲಿ ಇದ್ದು ಬಾಣಂತಿತನ ಮುಗಿದ ಮೇಲೆ ಅವಳನ್ನು 1 ನೇ ಆರೋಪಿಯು ತನ್ನ ಬೆಂಗಳೂರಿನ ಮನೆಗೆ ಕರೆದುಕೊಂಡು ಹೋಗಿರುತ್ತಾನೆ.

6. ನಂತರ ದಿಃ07.05.2017 ರಲ್ಲಿ ನನ್ನ 3 ನೇ ಮಗಳ ಮಗುವಿನ Birthday ಇದ್ದು ಆ ಮಗುವಿಗೆ gift ಕೊಡಿಸುವ ವಿಚಾರದಲ್ಲಿ ಕಾವ್ಯಶ್ರೀಯ ಜೊತೆ 1 ನೇ ಆರೋಪಿ ಜಗಳ ಮಾಡಿರುತ್ತಾನೆ. ಆ ಸಮಯದಲ್ಲಿ 1 ನೇ ಆರೋಪಿಯು ನನ್ನ ಮಗಳ ಕಾವ್ಯಶ್ರೀಯ ಕುತ್ತಿಗೆಯನ್ನು ಹಿಸುಕಿ ಕೊಲೆ ಮಾಡುವ ಪ್ರಯತ್ನಿಸಿದಾಗ ನನ್ನ ಮಗಳು ಆಗ ತಪ್ಪಿಸಿಕೊಂಡು ಬೆಂಗಳೂರಿನ Victoria ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡಿರುತ್ತಾಳೆ. ಸದರಿ ವಿಚಾರವನ್ನು ನಮಗೆ ನಮ್ಮ ಮಗಳು ನಮಗೆ ಪೋನ್ ಮೂಲಕ ತಿಳಿಸಿರುತ್ತಾಳೆ. ನಂತರ ಅಜ್ಜೇಗೌಡರು ಮತ್ತು ನನ್ನ ಗಂಡ ಬೆಂಗಳೂರಿಗೆ ಹೋಗಿ 1 ನೇ ಆರೋಪಿಯ ವಿರುದ್ಧ ಪುಟ್ಟೇನಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿರುತ್ತಾಳೆ. ಆ ದೂರಿನ ಕುರಿತಂತೆ ರಾಜೀ ಮಾಡಿ ನಂತರ ನನ್ನ ಮಗಳನ್ನು ವಾಪಸ್ಸು 1 ನೇ ಆರೋಪಿಯ ಮನೆಗೆ

ಕಳುಹಿಸಿಕೊಟ್ಟಿರುತ್ತಾಳೆ. ನಂತರ ನನ್ನ ಮಗಳನ್ನು ಬೆಂಗಳೂರಿನಿಂದ ಕರೆದುಕೊಂಡು ಬಂದು ಚಿಕ್ಕಮಗಳೂರಿನ ಅವಳ ಅತ್ತೆ, ಮಾವನ ಮನೆಯಲ್ಲಿ ಬಿಟ್ಟಿರುತ್ತೇವೆ.

7. ನಂತರ ನನ್ನ ಮಗಳು ಕಾವ್ಯಶ್ರೀಯು ಚಿಕ್ಕಮಗುಳೂರಿನ ಎಂ.ಇ.ಎಸ್. ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕಿಯಾಗಿ ಕೆಲಸ ಮಾಡುತ್ತಿದ್ದಳು. ಆ ಸಮಯದಲ್ಲಿ ಕಾವ್ಯಶ್ರೀಗೆ ಅವಳ ಅತ್ತೆ ಮಾವ ವರದಕ್ಷಿಣೆಯ ವಿಚಾರವಾಗಿ ಹಿಂಸೆ ಕಿರುಕುಳ ನೀಡಿರುತ್ತಾರೆ ಮತ್ತು 4 ನೇ ಆರೋಪಿ ಶೀಲಾ ಅವಳ ತಂದೆ ತಾಯಿಯಾದ 2 ಮತ್ತು 3 ನೇ ಆರೋಪಿಗಳಿಗೆ ಫೋನ್ ಮಾಡಿ ನನ್ನ ಮಗಳಿಗೆ ವರದಕ್ಷಿಣೆಯ ವಿಚಾರವಾಗಿ ಹಿಂಸೆ ನೀಡುವಂತೆ ಪ್ರೇರೇಪಿಸಿರುತ್ತಾಳೆ.

8. ದಿಃ 27.09.2017 ರಂದು ಮಧ್ಯಾಹ್ನ 1.30 ಗಂಟೆಗೆ ನನ್ನ ಸಂಬಂಧಿಕಳಾದ ಸರೋಜ ನನಗೆ ಫೋನ್ ಮಾಡಿ 2 ಮತ್ತು 3 ನೇ ಆರೋಪಿಗಳು ಕಾವ್ಯಶ್ರೀಗೆ ಚಾಕುವಿನಿಂದ ಕೈ ಮತ್ತು ಕಾಲಿಗೆ ಬರೇ ಹಾಕಿ, ಅವಳ ಕುತ್ತಿಗೆಗೆ ಮೊಬೈಲ್ Charger ವೈರ್ ನಿಂದ ಬಿಗಿದು ಅವಳನ್ನು ಕೊಲೆ ಮಾಡಲು ಪ್ರಯತ್ನ ಪಟ್ಟಿದ್ದು ತಾನು ಆ ಸಮಯದಲ್ಲಿ ಅವರ ಮನೆಯಲ್ಲಿ ಇದ್ದು ಗಲಾಟೆಯನ್ನು ಬಿಡಿಸಿ ನಂತರ ತನ್ನ ಸ್ಕೂಟಿಯ ಮೇಲೆ ನನ್ನ ಮಗಳನ್ನು ಕೂರಿಸಿಕೊಂಡು ಚಿಕ್ಕಮಗಳೂರಿನ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಬಂದು ದಾಖಲು ಮಾಡಿರುವ ವಿಷಯವನ್ನು ತಿಳಿಸಿರುತ್ತಾಳೆ.

9. ನಂತರ ವಿಷಯವನ್ನು ತಿಳಿದು ನಾನು ಮತ್ತು ನನ್ನ ಗಂಡ ರಾಜೇಗೌಡರು ಆಸ್ಪತ್ರೆಗೆ ಹೋಗಿ ನನ್ನ ಮಗಳನ್ನು ವಿಚಾರಿಸಿದಾಗ ನನ್ನ ಮಗಳು ಅವಳ ಅತ್ತೆ ಮಾವ ವರದಕ್ಷಿಣೆ ತರಲಿಲ್ಲ ಎನ್ನುವ

ವಿಚಾರವಾಗಿ ಅವಳ ಎಡಗೈ ಮತ್ತು ಬಲಗಾಲಿಗೆ ಚಾಕುವಿನಿಂದ ಬರೇ ಹಾಕಿ, ಮೊಬೈಲ್ ಚಾರ್ಜರ್ ವೈರ್ ನಿಂದ ಅವಳ ಕುತ್ತಿಗೆಗೆ ಬಿಗಿದು ಕೊಲೆ ಮಾಡುವ ಪ್ರಯತ್ನ ಮಾಡಿದ್ದು ಮತ್ತು 2 ಮತ್ತು 3 ನೇ ಆರೋಪಿಗಳು ನನ್ನ ಮಗಳು ಸತ್ತರೇ ಅವರ ಮಗನಿಗೆ ಇನ್ನೊಂದು ಮದುಗೆ ಮಾಡುತ್ತೇನೆ ಎಂದು ಹೇಳಿ ನನ್ನ ಮಗಳಿಗೆ ಬೆನ್ನಿಗೆ ಗುದ್ದಿರುತ್ತಾರೆ. ಈ ವಿಚಾರವಾಗಿ ನನ್ನ ಮಗಳು ಮಹಿಳಾ ಪೊಲೀಸ್ ಠಾಣೆಯಲ್ಲಿ 1 ರಿಂದ 4 ನೇ ಆರೋಪಿಗಳ ವಿರುದ್ಧ ದೂರು ನೀಡಿರುತ್ತಾಳೆ. ನಾನು ಈ ಕುರಿತಂತೆ ಆರೋಪಿಗಳ ವಿರುದ್ಧ ದಿಃ 29.09.2017 ರಂದು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

10. ನನ್ನ ಮಗಳು ಕಾವ್ಯಶ್ರೀಗೆ ಮದುವೆಯಾದ ನಂತರ ವರದಕ್ಷಿಣೆಯ ವಿಚಾರವಾಗಿ 1 ರಿಂದ 4 ಆರೋಪಿಗಳು ಹಿಂಸೆ ಕಿರುಕುಳ ನೀಡಿದ್ದು ಮತ್ತು 2 ಮತ್ತು 3 ನೇ ಆರೋಪಿಗಳು ನನ್ನ ಮಗಳಿಗೆ ಚಾಕುವಿನಿಂದ ಅವಳ ಕೈ ಮತ್ತು ಕಾಲಿಗೆ ಬರೇ ಹಾಕಿ ಅವಳ ಕುತ್ತಿಗೆಗೆ ಮೊಬೈಲ್ ಚಾರ್ಜರ್ ವೈರ್ ನಿಂದ ಬಿಗಿದು ಕೊಲೆ ಮಾಡಲು ಪ್ರಯತ್ನ ಪಟ್ಟಿದ್ದು, ಸದರಿ ಆರೋಪಿಗಳು ಈಗ ನ್ಯಾಯಾಲಯದ ಮುಂದಿರುವ ಆರೋಪಿಗಳೇ ಆಗಿರುತ್ತಾರೆ.

<u>ಪಾಟೀ ಸವಾಲು ಶ್ರೀ ಐ.ಎಸ್.ಟಿ. ವಕೀಲರಿಂದ – ಆರೋಪಿತರ ಪರವಾಗಿ</u>

11. ಆರೋಪಿ ಪರ ವಕೀಲರು ಕಲಂ 231(2) Cr.P.C ಅರ್ಜಿ ಹಾಕಿದ್ದು, ಮೇಲ್ಕಾಣಿಸಿದ ಪಾಟೀ ಸವಾಲನ್ನು ಚಾಸಾ.8, 10, 12, 13 ಇವರುಗಳು ಮುಖ್ಯವಿಚಾರಣೆಯಾದ ನಂತರ ಮಾಡುವುದಾಗಿ ವಿನಂತಿಸಿಕೊಂಡಿರುತ್ತಾರೆ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)
ಓ.ಹೇ.ಕೇ.ಸ.ಇ.ಎ.ಒ.

(ಮಂಜುನಾಥ ಸಂಗ್ರೇಶಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಮಾ.